

ವ್ಹಿ. ಅಂಬು

# 'ಇಂಪ್ಟೆಕ್ಸ್' ಆಯೋಜಕರ ಒಂದು ನೋಟ

**ವ್ಹಿ. ಅಂಬು ಇವರು ಇಂಡಿಯನ್ ಮಶಿನ್ ಟೂಲ್ ಮ್ಯಾನ್ಯುಫ್ಯಾಕ್ಚರಿಂಗ್ ಅಸೋಸಿಯೇಶನ್ (IMTMA) ಡೈರೆಕ್ಟರ್ ಜನರಲ್ ಮತ್ತು ಸಿ.ಇ.ಓ. ಆಗಿದ್ದು, ಅವರು ಬೆಂಗಳೂರು ಇಂಟರ್‌ನ್ಯಾಶನಲ್ ಎಕ್ಸಿಬಿಶನ್ ಸೆಂಟರ್‌ನ (BIEC) ಸಿ.ಇ.ಓ. ಆಗಿದ್ದಾರೆ. IISc ನಿಂದ ಇಂಜಿನಿಯರಿಂಗ್ ಪದವೀಧರರಾದ ವ್ಹಿ. ಅಂಬು ಇವರಿಗೆ ಉದ್ಯಮ ಕ್ಷೇತ್ರದಲ್ಲಿ 27 ವರ್ಷಗಳಿಗಿಂದ ಹೆಚ್ಚು ಅನುಭವವಿದೆ. ಉದ್ಯಮ ಪ್ರಕಾಶನದ ಸಂಪಾದಕರು ಕೇಳಿರುವ ಪ್ರಶ್ನೆಗಳಿಗೆ ಅವರು ನೀಡಿರುವ ಬಿಚ್ಚು ಮನಸ್ಸಿನ ಉತ್ತರಗಳು...**

**ಇಂಪ್ಟೆಕ್ಸ್‌ನಂತಹ ಪ್ರದರ್ಶನವನ್ನು ಯೋಜಿಸುವಲ್ಲಿ ತಮ್ಮ ಗುರಿ ಏನಿರುತ್ತದೆ? ತಾವು ಈ ಗುರಿಯನ್ನು ಹೇಗೆ ನಿರ್ಧರಿಸುತ್ತೀರಿ? ಈ ಗುರಿಯನ್ನು ಸಾಧಿಸುತ್ತೇವೆ ಎಂದು ತಾವು ಹೇಗೆ ನಿರ್ಧರಿಸುತ್ತೀರಿ? ಭಾರತೀಯ ಉದ್ಯೋಗಕ್ಷೇತ್ರದ ಬದಲಾವಣೆಗಳ ಪ್ರಕಾರ ತಾವು ತಮ್ಮ ಗುರಿಯನ್ನು ಆಗಾಗ ಸುಧಾರಿಸುತ್ತೀರಾ?**

**ಇಂಪ್ಟೆಕ್ಸ್‌ನ ಮುಖ್ಯವಾದ ಧ್ಯೇಯಗಳು ಮುಂದಿನಂತಿವೆ**

ಅ) ಜಗತ್ತಿನಾದ್ಯಂತದ ಉತ್ಪಾದನೆಯ ತಂತ್ರಜ್ಞಾನದಲ್ಲಿರುವ ಪ್ರಗತಿಯು ಭಾರತೀಯ ಉತ್ಪಾದನೆಯ ಕ್ಷೇತ್ರದ ಹೊಸ್ತಿಲಲ್ಲಿ ತಂದಿಡುವುದು ಮತ್ತು ಭಾರತೀಯ ಉತ್ಪಾದನೆಗಳನ್ನು ಸ್ವಲ್ಪ ಸ್ವಲ್ಪವಾಗಿ ಆಂತರರಾಷ್ಟ್ರೀಯ ಮಟ್ಟದ ಹಂತದ ವರೆಗೆ ಆಗಬೇಕು ಎಂದು ಪ್ರಯತ್ನವನ್ನು ಮಾಡುವುದು.

ಆ) ಹೊಸದಾಗಿ ಬೆಳೆಯುತ್ತಿರುವ ಉತ್ಪಾದನೆಯ ಕ್ಷೇತ್ರದ ಬೇಡಿಕೆಗಳನ್ನು ಪೂರ್ತಿ ಮಾಡಲು ಮಶಿನ್ ಟೂಲ್ ಉತ್ಪಾದಕರ ಕ್ಷಮತೆಯನ್ನು ಹೆಚ್ಚಿಸುವುದು.

ಇ) ಮಶಿನ್ ಟೂಲ್ ಉತ್ಪಾದಕರು ಮತ್ತು ಅದರ ಉಪಯೋಗವನ್ನು ಮಾಡುವವರಲ್ಲಿ ದೃಢವಾದ ವ್ಯವಸಾಯದ ಸಂಬಂಧಗಳು ನಿರ್ಮಾಣವಾಗುವಂತೆ ಅವರನ್ನು ಒಂದೇ ವೇದಿಕೆಯಲ್ಲಿ ಒಂದುಗೂಡಿಸುವುದು.

ಈ) ಭಾರತೀಯ ಉತ್ಪಾದನೆಗಳು ಮತ್ತು ಮಶಿನ್ ಟೂಲ್ ಉದ್ಯೋಗ ಮತ್ತು ತಂತ್ರಜ್ಞಾನದ ಮೂಲಕ ಸಮಸ್ಯೆಗಳ ನಿವಾರಣೆಯನ್ನು ಮಾಡುವ ವ್ಯಕ್ತಿ ಅಥವಾ ಸಂಸ್ಥೆ ಇವರ ಕ್ಷಮತೆಯನ್ನು ಹೊರಗಿನ ಜಗತ್ತಿಗೆ ಪರಿಚಯಿಸುವುದು.

ಪ್ರತಿಯೊಂದು ಔದ್ಯೋಗಿಕ ಸಂಘಟನೆಯಲ್ಲಿ ಅವರ ಉದ್ಯೋಗಕ್ಷೇತ್ರದ ವಿಕಾಸ ಮಾಡಲು ಒಂದು ದೃಷ್ಟಿ ಮತ್ತು ಅದನ್ನು ಸಾಕಾರಗೊಳಿಸುವ ಕಾರ್ಯಕ್ರಮವು ಇರುತ್ತದೆ. ಇಂಪ್ಟೆಕ್ಸ್‌ನಂತಹ ಪ್ರದರ್ಶನಗಳು ಅವರಿಗೆ ಅವರ ದೃಷ್ಟಿಯನ್ನು ಸಾಕಾರಗೊಳಿಸಲು ಸಹಾಯ ಮಾಡುತ್ತದೆ. ಪ್ರದರ್ಶನದ ಧ್ಯೇಯಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ, ಆದರೂ ಕೂಡಾ ಅದರಲ್ಲಿ ಪ್ರದರ್ಶಿಸುವಂತಹ ಉತ್ಪಾದನೆಗಳ ಮತ್ತು ಸಹಭಾಗಿಗಳಾಗುವ ಉದ್ಯಮಿಗಳ ಸ್ವರೂಪ ಮತ್ತು ವೈವಿಧ್ಯಗಳು ಹೆಚ್ಚು ವಿಸ್ತಾರವಾಗುತ್ತಾ ಹೋಗುತ್ತಿವೆ ಮತ್ತು ಪ್ರತಿವರ್ಷದ ಪ್ರದರ್ಶನದಲ್ಲಿ ತಂತ್ರಜ್ಞಾನದಲ್ಲಿರುವ ಹೊಸದಾದ ಬದಲಾವಣೆಗಳು ನೋಡಲು ಸಿಗುತ್ತಿವೆ.

**ತಮಗೆ ಈ ಪ್ರದರ್ಶನಗಳಿಂದ ಉದ್ಭವಿಸುವ ಯಾವುದೇ ಒಂದು ವಿಶಿಷ್ಟವಾದ ಥೀಮ್ ಕಾಣುತ್ತದೆಯೇ? ಈ ಹಿಂದಿನ ದಶಕಗಳಿಂದ ಈ ತನಕ ಥೀಮ್‌ನಲ್ಲಿ ಆಗುತ್ತಿರುವ ಬದಲಾವಣೆಗಳ ಕಡೆಗೆ ತಾವು ಹೇಗೆ ನೋಡುತ್ತೀರಿ?**

ಇಂಪ್ಟೆಕ್ಸ್‌ನಂತಹ ಪ್ರದರ್ಶನಕ್ಕೆ ಯಾವುದೇ ವಿಶಿಷ್ಟವಾದ ಥೀಮ್ ಇರುವುದಿಲ್ಲ. ಆದರೂ ಕೂಡಾ ವಿಕಾಸ ಮತ್ತು ತಂತ್ರಜ್ಞಾನದ ದೃಷ್ಟಿಯಲ್ಲಿ ಜಗತ್ತು ಪ್ರಗತಿಯ ಹಾದಿಯಲ್ಲಿ ಇರುವುದರಿಂದ ಹೊಸ ಉತ್ಪಾದನೆಗಳು ಮತ್ತು ತಂತ್ರಜ್ಞಾನ ಪ್ರಸ್ತುತ ಪಡಿಸುವ ದೃಷ್ಟಿಯಲ್ಲಿ ಹೆಚ್ಚಿನ ಅವಕಾಶಗಳು ವೃದ್ಧಿಯಾಗುತ್ತಿವೆ.

**ತಾವು ಈ ಪ್ರದರ್ಶನಗಳ ತಯಾರಿಯನ್ನು ಯಾವ ರೀತಿಯಲ್ಲಿ ಮಾಡುತ್ತೀರಿ? ಅದಕ್ಕೋಸ್ಕರ ಎಷ್ಟು ವೇಳೆ ಬೇಕಾಗುತ್ತದೆ? ಹೊಸದಾಗಿ ಬರಲಿರುವ ಗ್ರಾಹಕರನ್ನು ಸೆಳೆಯಲು ತಮ್ಮ ಅನಿಸಿಕೆಯ ಪ್ರಕಾರ ಯಾವ ಪರ್ಯಾಯಗಳು ಸರ್ವೋತ್ತಮವಾಗಿವೆ? ತಾವು ಇಂಪ್ಟೆಕ್ಸ್ 2019 ರಲ್ಲಿ ಭಾಗವಹಿಸುವ ಹೊಸ (ಭಾರತೀಯ ಅಥವಾ ಅಂತರರಾಷ್ಟ್ರೀಯ) ಉತ್ಪಾದನೆಗಳ ಒಂದು ಸಹಜವಾದ ಜಾಣತನವನ್ನು ಹೇಳಿರಿ.**

ಯಾವುದೇ ಪ್ರದರ್ಶನದ ಸಫಲತೆಯು, ಅದರಲ್ಲಿ ಭಾಗವಹಿಸುವವರು ಮತ್ತು ಅದಕ್ಕೆ ಭೇಟಿ ನೀಡುವ ಅತಿಥಿಗಳು ಇವರ ಅಪೇಕ್ಷೆಗಳನ್ನು ಎಷ್ಟು ಮಟ್ಟದಲ್ಲಿ ಪೂರ್ಣಗೊಳಿಸುತ್ತೀರಿ, ಇದರಲ್ಲಿ ಅವಲಂಬಿಸಿರುತ್ತದೆ. ಒಂದು ಔದ್ಯೋಗಿಕ ಸಂಘಟನೆ ಎಂದು, ನಾವು ಈ ಪ್ರದರ್ಶನದಲ್ಲಿ ಯೋಜನೆಗೋಸ್ಕರ ಮತ್ತು ಸಿದ್ಧತೆಗೋಸ್ಕರ ತುಂಬಾ ಸಮಯವನ್ನು ತೆಗೆದುಕೊಳ್ಳುತ್ತೇವೆ. ಇದರಿಂದಾಗಿ ಎಲ್ಲವೂ ಸುಲಭವಾಗಿ ನಡೆಯುತ್ತದೆ. ಎಲ್ಲ ಯೋಜನೆ ಮತ್ತು ಸಿದ್ಧತೆ ಒಂದು ಸ್ಪಷ್ಟವಾದ ಪ್ರಕ್ರಿಯೆಯ ಮೂಲಕ ಮಾಡಲಾಗುತ್ತದೆ ಮತ್ತು ಅದರಲ್ಲಿ ಹೊಸಹೊಸ ತಂತ್ರಜ್ಞಾನದ ಸಹಾಯವನ್ನು ಪಡೆಯಲಾಗುತ್ತದೆ. ಇದರಿಂದಾಗಿ ನಾವು ಪ್ರದರ್ಶನವನ್ನು ವ್ಯವಸಾಯದ ದೃಷ್ಟಿಯಲ್ಲಿ ಯೋಜಿಸಲು ಸಕ್ಷಮರಾಗಿದ್ದೆವು ಮತ್ತು ಇಂಪ್ಟೆಕ್ಸ್ ಇದು ನಿರ್ವಿವಾದವಾಗಿ

# ACCUSHARP
Cutting Tools Pvt. Ltd.
An ISO 9001:2015

CUT FAST
An ISO 9001:2015
CUT COST

## Manufacturers of Metal Cutting Tools





WE STAND AS YOUR PRODUCTIVITY PARTNER

### ASSURING

- Right Quality
- Shortest Lead Time
- Cost Effective
- On-Time Delivery
- Innovative Approach

***We are for those, who are in Metal Cutting!***




***And For Many Other Industry Sectors***

**Head Office & Factory:**
W-242, J Block, MIDC, Bhosari, Pune – 411026.
Maharashtra, (India) Tel.: 020-27129016
Email: accusharp@accusharp.co.in I www.accusharp.co.in

**Mr. Ayaz Shaikh**
Marketing Director
Mobile: +91 9822017832
Email: ayaz@accusharp.co.in

***LOGISTIC NETWORK, ALLOVER INDIA, CLOSE TO CUSTOMER'S DOOR***

**OUR BRANCHES:**
• Uttaranchal • Delhi • Kolhapur • Ahmedabad • Indore • Nashik • Bangalore • Hyderabad

TÜV AUSTRIA
CERTIFIED
EN ISO 9001
CERTIFICATE NO. 20 100 112006739
TUV AUSTRIA CERT GMBH

www.odcindia.co.in

**Visit Our Stall at IMTEX 2019 - Hall No. 3A | Stall No. F101**

ಮುಂಚೂಣಿಯಲ್ಲಿದೆ. ಇಂಪ್ಟೆಕ್ಸ್ 2019 ಮತ್ತು ಟೂಲ್‌ಟೆಕ್ 2019 ಈ ಪ್ರದರ್ಶನಗಳಲ್ಲಿ 20 ದೇಶಗಳು ಭಾಗವಹಿಸಿದ್ದು ಅಲ್ಲದೇ 7 ದೇಶಗಳು (ಚೀನಾ, ಜರ್ಮನಿ, ಕೋರಿಯಾ, ಸ್ಪೇನ್, ತೈವಾನ್, ಯು.ಕೆ. ಮತ್ತು ಅಮೇರಿಕಾ) ಸ್ಟಾಲ್‌ಗಳಿವೆ.

**ಪ್ರದರ್ಶನಕ್ಕೆ ಭೇಟಿ ನೀಡುವವರ ಅಪೇಕ್ಷೆಯನ್ನು ಪೂರ್ಣಗೊಳಿಸಲು ತಾವು ಲಘು ಮಧ್ಯಮ ಉದ್ಯಮಿಗಳು (ಎಸ್‌ಎಮ್‌ಎಸ್‌ಇ) ಮತ್ತು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯನ್ನು ಮಾಡುವ ಕಂಪನಿಗಳಿಗೋಸ್ಕರ ತಾವು ವಿವಿಧ ಧೋರಣೆಗಳನ್ನು ಅವಲಂಬಿಸಿದ್ದೀರಾ?**

ಇಂಪ್ಟೆಕ್ಸ್‌ನಲ್ಲಿ ಲಘು ಮಧ್ಯಮ ಉದ್ಯೋಜಕರು (ಎಸ್‌ಎಮ್‌ಎಸ್‌ಇ) ಮತ್ತು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯನ್ನು ಮಾಡುವ ಕಂಪನಿಗಳು ಇದರಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡಲಾಗುವುದಿಲ್ಲ. ಭೇಟಿ ನೀಡುವವರು ತಮ್ಮ ಇಷ್ಟದಂತೆ ಯಾವ ಸ್ಟಾಲ್‌ಗೆ ಭೇಟಿ ನೀಡುವುದು ಎಂದು ನಿರ್ಧರಿಸುತ್ತಾರೆ. ಪ್ರದರ್ಶನಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ನಮ್ಮ ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ ಮತ್ತು ಅದನ್ನು ನೋಡಿ ಪ್ರದರ್ಶನವು ಪ್ರಾರಂಭವಾಗುವುದಕ್ಕಿಂತ ಮುಂಚೆ ಯಾವುದೇ ಅತಿಥಿಯು ತನ್ನದೇ ಆದ ವೇಳಾಪಟ್ಟಿಯನ್ನು ನಿಗದಿಪಡಿಸಬಹುದು. ಈ ವೇದಿಕೆಗೆ ಭೇಟಿ ನೀಡುವವರು ಪ್ರದರ್ಶನದ ಆಯೋಜಕರ ಜೊತೆಗೆ ಸಂಬಂಧವನ್ನು ಇಟ್ಟಕೊಳ್ಳುತ್ತಾರೆ ಮತ್ತು ಅವರು ಪ್ರದರ್ಶಿಸಿರುವ ಉತ್ಪಾದನೆಗಳು ಮತ್ತು ತಂತ್ರಜ್ಞಾನದ ಬಗ್ಗೆ ಹೆಚ್ಚು ತಿಳಿದುಕೊಳ್ಳಬಹುದು.

IMTMA ಇವರು ಪ್ರದರ್ಶನಕರ್ತರು ಮತ್ತು ಪ್ರದರ್ಶನಕ್ಕೆ ಭೇಟಿ ನೀಡುವವರು ಇವರಲ್ಲಿ ಪರಸ್ಪರವಾದ ಸಂವಾದಗಳನ್ನು ಹೊಂದಿಸಿ ತರಲು ಒಂದು ಎಕ್ಸ್ಪೋ ಪ್ಲಾಟ್‌ಫಾರ್ಮ್ ತಯಾರು ಮಾಡಿದ್ದಾರೆ. ಪ್ರದರ್ಶನಕರ್ತರು ಪ್ಲಾಟ್‌ಫಾರ್ಮ್‌ನಲ್ಲಿ ತನ್ನಷ್ಟಕ್ಕೆ ನೊಂದಾಣಿಕೆಯನ್ನು ಮಾಡುತ್ತಾರೆ ಮತ್ತು ಸ್ವಂತದ್ದೇ ಆದ ಉತ್ಪಾದನೆಗಳನ್ನು ಅಪ್‌ಲೋಡ್ ಮಾಡಬಲ್ಲರು. ಈ ಪ್ಲಾಟ್‌ಫಾರ್ಮ್‌ನಲ್ಲಿ ರಿಜಿಸ್ಟರ್ ಮಾಡುವ ಅತಿಥಿಗಳಿಗೆ ವಿಶೇಷವಾದ ಉತ್ಪಾದನೆಗಳ ಬಗ್ಗೆ ಮಾಹಿತಿಯನ್ನು ಪಡೆಯುವುದು ಸಾಧ್ಯವಾಗಿ ಮತ್ತು ಮುಂದಿನ ವಿಮರ್ಶೆಯನ್ನು ಮಾಡುವುದೂ ಸಾಧ್ಯವಾಗಿದೆ.

**ಭಾಗವಹಿಸುವವರಿಂದ ಅವರ ಅಪೇಕ್ಷೆಗಳು ಮತ್ತು ಅಭಿಪ್ರಾಯವನ್ನು ಒಟ್ಟು ಮಾಡಲು ತಾವು ಯಾವ ವ್ಯವಸ್ಥೆಯನ್ನು ಇಂಪ್ಟೆಕ್ಸ್ ಪ್ರದರ್ಶನದ ಮುಂಚೆ ಮತ್ತು ನಂತರ ಮಾಡುತ್ತೀರಿ? ಇಂಪ್ಟೆಕ್ಸ್‌ನ ಗುಣಮಟ್ಟವನ್ನು ಹೆಚ್ಚಿಸಲು ತಾವು ಅದರ ಉಪಯೋಗವನ್ನು ಹೇಗೆ ಮಾಡುತ್ತೀರಿ?**

ಭಾಗವಹಿಸುವವರಿಂದ ಅವರ ಅಪೇಕ್ಷೆಗಳನ್ನು ಮತ್ತು ಅಭಿಪ್ರಾಯಗಳನ್ನು ಒಟ್ಟು ಮಾಡಲು ನಾವು ಒಂದು ಒಳ ಪ್ರಕ್ರಿಯೆಯನ್ನು ತಯಾರು ಮಾಡಿದ್ದೇವೆ ಮತ್ತು ಅದರಿಂದ ಸಿಕ್ಕಿರುವ ಮಾಹಿತಿಯನ್ನು ಉಪಯೋಗಿಸಿ ಮುಂದಿನ ವರ್ಷಗಳ ಪ್ರತಿಯೊಂದು ಪ್ರದರ್ಶನಗಳ ಗುಣಮಟ್ಟವನ್ನು ಸುಧಾರಿಸಲು ನಾವು ಅಗತ್ಯವಾದ ಹೆಜ್ಜೆಯನ್ನು ಇಡುತ್ತಿದ್ದೇವೆ.

**ಈ ಕಳೆದ ಕೆಲವು ವರ್ಷಗಳಲ್ಲಿ ಭಾಗವಹಿಸುವವರಲ್ಲಿ ತಮಗೆ ಏನೇನು ವ್ಯತ್ಯಾಸವು ಕಾಣುತ್ತಿದೆ, ಅದನ್ನು ದಯವಿಟ್ಟು ನಮಗೆ ತಿಳಿಸಿರಿ.**

ಪ್ರದರ್ಶನದ ಆಯೋಜಕರು ಮತ್ತು ಭೇಟಿ ನೀಡುವವರು ಇವರ ತನಕ ವಿವರಗಳು ತಲುಪಿಸುವುದರ ಕುರಿತು ತಂತ್ರಜ್ಞಾನವು ವಿಶೇಷವಾಗಿ ಭಾಗವಹಿಸುತ್ತದೆ. ಸೋಶಿಯಲ್ ಮೀಡಿಯಾ ಮತ್ತು ವಿವಿಧ ಡಿಜಿಟಲ್ ಮಾಧ್ಯಮಗಳ ಸಾಂಪ್ರದಾಯಿಕವಾದ ಜಾಹಿರಾತುಗಳ ಸಾಧನಗಳಿಗೆ ಪೂರಕವಾಗಿರುವುದು ಕಾಣಸಿಗುತ್ತದೆ. ಈ ಪ್ಲಾಟ್‌ಫಾರ್ಮ್‌ನ ಬಗ್ಗೆ ಮಹತ್ತರವಾದ ವಿಷಯವನ್ನು ಹೇಳುವುದಾದರೆ, ಇದರಿಂದಾಗಿ ಪ್ರದರ್ಶನದ ಯೋಜಕರು ಮತ್ತು



# BIEC Site Plan






ಭೇಟಿ ನೀಡುವವರು ಇವರಲ್ಲಿ ಪರಸ್ಪರವಾಗಿ ನೇರ ಸಂಭಾಷಣೆಯು ನಡೆಯುವಂತಹ ಸನ್ನಿವೇಶವು ನಿರ್ಮಾಣವಾಗುತ್ತದೆ.

**ಇನ್ನಿತರ ಜಾಗತಿಕ ಪ್ರದರ್ಶನಗಳ ತುಲನೆಯಲ್ಲಿ ತಾವು ಇಂಪ್ಟೆಕ್ಸ್‌ಗೆ ಯಾವ ಮಾನಾಂಕನವನ್ನು ನೀಡುತ್ತೀರಿ?**

ಇಂಪ್ಟೆಕ್ಸ್ ಇದು ಜರ್ಮನಿ, ಜಪಾನ್, ಅಮೆರಿಕಾ ಇಂತಹ ದೇಶಗಳಲ್ಲಿಯೂ ನಡೆಯುವಂತಹ ಪ್ರಸಿದ್ಧವಾದ ಜಾಗತಿಕವಾದ ಮಶಿನ್ ಟೂಲ್ ಪ್ರದರ್ಶನಗಳ ಪೈಕಿ ಒಂದೆಂದು ಗುರುತಿಸಲಾಗುತ್ತಿದೆ. ಇತರ ಅಂತರರಾಷ್ಟ್ರೀಯ ಮಶಿನ್ ಟೂಲ್ ಪ್ರದರ್ಶನಗಳಂತೆಯೇ ಇಂಪ್ಟೆಕ್ಸ್ ಇದು ತನ್ನದೇ ಆದ ಹಲವಾರು ನಿರ್ದಿಷ್ಟವಾದ ವಿಷಯಗಳನ್ನು ಹೊಂದಿದೆ. ಇದರಿಂದಾಗಿ ಅದರ ವ್ಯತ್ಯಾಸವು ಎದ್ದು ಕಾಣುತ್ತದೆ ಮತ್ತು ಅದರಿಂದಾಗಿ ದಕ್ಷಿಣ ಮತ್ತು ದಕ್ಷಿಣ-ಪೂರ್ವ ಏಶಿಯಾ ಖಂಡದಲ್ಲಿ ಅಗ್ರಸ್ಥಾನದಲ್ಲಿರುವ ಮಶಿನ್ ಟೂಲ್ ಪ್ರದರ್ಶನವಾಗಿದೆ.

**ತಾವು ಇಂಪ್ಟೆಕ್ಸ್‌ನಲ್ಲಿ ಹೊಸ ತಂತ್ರಜ್ಞಾನಕ್ಕೆ ಹೇಗೆ ಪ್ರೋತ್ಸಾಹವನ್ನು ಕೊಡುತ್ತೀರಿ?**

ಇಂಪ್ಟೆಕ್ಸ್‌ಗೆ 50 ವರ್ಷಗಳು ಪೂರ್ತಿಯಾಗುತ್ತಿವೆ ಮತ್ತು ಅದನ್ನು ಆಚರಿಸಲು ನಾವು ಎರಡು ಸ್ಟಾಲ್‌ಗಳನ್ನು ಮಾಡುವಂತಹ ಘೋಷಣೆಯನ್ನು ಮಾಡಿರುತ್ತೇವೆ. ಎಡಿಟಿವ್ಹ್ ಉತ್ಪಾದನೆಗಳು ಮತ್ತು ಇಂಡಸ್ಟ್ರೀ 4.0 ಇದಕ್ಕೋಸ್ಕರ ಎರಡು ಸ್ವತಂತ್ರವಾದ ಸ್ಟಾಲ್‌ಗಳು ಈ ವರ್ಷ ಇರುತ್ತವೆ. ಈ ತಂತ್ರಜ್ಞಾನವು ಉತ್ಪಾದನೆಗೆ ಹೊಸ ವೇಗವನ್ನು ನೀಡುತ್ತಿದೆ ಮತ್ತು ಉತ್ಪಾದನೆಯ ಕ್ಷೇತ್ರದಲ್ಲಿ ವ್ಯವಹಾರ ಹೆಚ್ಚಿಸುವಲ್ಲಿ ತುಂಬಾ ದೊಡ್ಡ ಪಾತ್ರವನ್ನು ವಹಿಸುವ ಅಪೇಕ್ಷೆ ಇದೆ.

ಇಂಡಸ್ಟ್ರೀ 4.0 ಇದರ ಸ್ಟಾಲ್ ಉತ್ಪಾದನೆಗೆ ಯೋಗ್ಯವಾದ ವಾತಾವರಣಕ್ಕೆ ಬೇಕಾಗುವ ವಿವಿಧ ತಂತ್ರಜ್ಞಾನಗಳನ್ನು ಒಟ್ಟಾಗಿ ಪ್ರದರ್ಶಿಸಬಹುದು. ಇಂಡಸ್ಟ್ರೀ 4.0 ಎಕ್ಸ್ಪೋ, ಇಂಡಸ್ಟ್ರೀ 4.0 ಇದರ ಅನುಷ್ಠಾನದ ಎಲ್ಲ ಬದಿಗಳನ್ನು ಒಂದೇ ಕಡೆ ನೋಡಲು ಮತ್ತು ಅನುಭವಿಸಲು ಒಂದು ಪ್ಲಾಟ್‌ಫಾರ್ಮ್ ಎಂದು ಕೆಲಸವನ್ನು ಮಾಡುತ್ತದೆ. ಇದರಲ್ಲಿ ಸೆನ್ಸರ್, ಎನಾಲಿಟಿಕ್ಸ್, ಕನೆಕ್ಟಿವ್ಹಿಟಿ, ಆಟೋಮೇಶನ್, ಸ್ಮಾರ್ಟ್ ಮಶಿನ್, ಡಿಜಿಟಲೈಜೇಶನ್, IoT, ಸೈಬರ್ ಸಂರಕ್ಷಣೆ ಇತ್ಯಾದಿಗಳು ಒಳಗೊಂಡಿವೆ. ಎಡಿಟಿವ್ಹ್ ಉತ್ಪಾದನೆಗಳ ಎಕ್ಸ್ಪೋದಲ್ಲಿ ಉತ್ಪಾದನೆಯ ಕ್ಷೇತ್ರದಲ್ಲಿರುವ ಉದ್ಯಮಿಗಳಿಗೆ ಎಡಿಟಿವ್ಹ್ ಉತ್ಪಾದನೆಗಳ ಟೆಕ್ನೋ-ಕಮರ್ಶಿಯಲ್ ಲಾಭಗಳ ಬಗ್ಗೆ ಸಮೀಪದ ವಿವರಗಳನ್ನು ನೀಡಲಾಗುತ್ತದೆ. ಈ ಸ್ಟಾಲ್ ನಲ್ಲಿ ಬೇರೆಬೇರೆ ವಿಭಾಗಗಳೂ ಇರುತ್ತವೆ. ಅದರಲ್ಲಿ ಉತ್ಪಾದನೆಯಲ್ಲಿನ ಅಭಿವೃದ್ಧಿ, ಇಂಜಿನಿಯರಿಂಗ್ ಮತ್ತು ಉತ್ಪಾದನೆಯಲ್ಲಿರುವ ಹೊಸತನವನ್ನು ಮತ್ತು ಎಡಿಟಿವ್ಹ್ ಉತ್ಪಾದನೆಗಳ ಮೂಲಕ ಅಭಿವೃದ್ಧಿ ಮಾಡಿರುವ ಉತ್ಪಾದನೆಗಳು ಇವುಗಳ ವಿವಿಧ ಬದಿಗಳಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಲಾಗುವುದು.